










ಭಾರತೀಯ ಅಂಚೆ ಇಲಾಖೆ ಪ್ರಪ್ರಥಮವಾಗಿ ‘ರಾಮಾಯಣ’ಕ್ಕೆ ಹೆಚ್ಚಿನ ಮಹತ್ವ ನೀಡಿದ್ದು 2017ರಲ್ಲಿ. ಒಮ್ಮೆಗೇ ಒಟ್ಟು ಹನ್ನೊಂದು ಅಂಚೆಚೀಟಿಗಳನ್ನು ಬಿಡುಗಡೆ ಮಾಡಿದ ಅಂಚೆ ಇಲಾಖೆ, ರಾಮಾಯಣದ ಮಿನಿಯೇಚರ್, ಹಾಳೆ, ಷೀಟ್‌ಲೆಟ್, ವಾಲ್ಮೀಕಿಯ ಚಿತ್ರದ ಲಕೋಟೆಯನ್ನೂ ಹೊರತಂದಿತು. ರಾಮಾಯಣದ ಸಂಕ್ಷಿಪ್ತ ರೂಪವನ್ನು ಆಕರ್ಷಕ ರೇಖಾಚಿತ್ರಗಳು ಹಾಗೂ ಸುಂದರ ಬಣ್ಣಗಳ ಸಂಯೋಜನೆಯೊಡನೆ ಹೊರತಂದಿರುವುದು ಈ ಅಂಚೆಚೀಟಿ ಸರಣಿಯ ವಿಶೇಷ. ರಾಮಾಯಣದ ಪ್ರಮುಖ ಘಟನಾವಳಿಗಳನ್ನು ಒಳಗೊಂಡ ಆ ಹನ್ನೊಂದು ಅಂಚೆಚೀಟಿಗಳಲ್ಲಿ – ರಾಮ ಸೀತೆಯನ್ನು ವರಿಸಿದ್ದು, ದಶರಥ ರಾಮನನ್ನು ವನವಾಸಕ್ಕೆ ಕಳಿಸಿದ್ದು, ಅಂಬಿಗ ರಾಮ ಲಕ್ಷ್ಮಣ ಸೀತೆಯನ್ನು ಗಂಗೆಯಲ್ಲಿ ಪಯಣ ಮಾಡಿಸಿದ್ದು, ಶಬರಿ ಹಣ್ಣಿನ ರುಚಿಯನ್ನು ರಾಮ ನೋಡಿದ್ದು, ರಾಮಸೇತುವೆ ನಿರ್ಮಾಣ, ಗಾಯಗೊಂಡ ಲಕ್ಷ್ಮಣನಿಗಾಗಿ ಆಂಜನೇಯ ದ್ರೋಣಗಿರಿಯನ್ನು ಹೊತ್ತು ತಂದಿದ್ದು, ರಾವಣ–ಜಟಾಯು ಪ್ರಸಂಗ, ಲಂಕೆಯ ಅಶೋಕವನದಲ್ಲಿ ಸೀತೆಗೆ ರಾಮನ ಉಂಗುರವನ್ನು ಆಂಜನೇಯ ನೀಡಿದ್ದು, ಶ್ರೀರಾಮ ಪಟ್ಟಾಭಿಷೇಕ ಸೇರಿದಂತೆ ಹನ್ನೊಂದು ಘಟನೆಗಳಿವೆ. ಈ ಸರಣಿ ಅಂಚೆಚೀಟಿಗಳು ಸಂಗ್ರಾಹಕರ ಪಾಲಿಗೆ ಅಮೂಲ್ಯವಾದವು.

ನೆರೆಹೊರೆಯ ರಾಷ್ಟ್ರಗಳೊಂದಿಗೆ ವಿಶೇಷ ಬಾಂಧವ್ಯ ರೂಪಿಸಿಕೊಳ್ಳುವ ಹಾದಿಯಲ್ಲಿ ಭಾರತ 2018ರ ಗಣರಾಜ್ಯೋತ್ಸವ ಸಂದರ್ಭದಲ್ಲಿ ಆಸಿಯಾನ್ ರಾಷ್ಟ್ರಗಳ ಮುಖ್ಯಸ್ಥರನ್ನು ಗಣತಂತ್ರ ದಿನೋತ್ಸವಕ್ಕೆ ಆಹ್ವಾನಿಸಿತ್ತು. ಭಾರತದ ಆಹ್ವಾನ ಒಪ್ಪಿಕೊಂಡ ಮಲೇಷ್ಯಾ, ಲಾವೋಸ್, ಬ್ರೂನೆ, ಫಿಲಿಪ್ಪೀನ್ಸ್, ವಿಯೆಟ್ನಾಂ, ಥಾಯ್ಲೆಂಡ್, ಮ್ಯಾನ್ಮಾರ್, ಇಂಡೋನೇಷ್ಯಾ ದೇಶಗಳಲ್ಲಿ ರಾಮಾಯಣದ ಕುರುಹುಗಳಿರುವುದು ವಿಶೇಷ. ಭಾರತೀಯ ಅಂಚೆ ಇಲಾಖೆ ಆ ವಿಶೇಷ ಸಮಯದ ಸವಿನೆನಪಿಗಾಗಿ ‘ಆಸಿಯಾನ್’ ದೇಶಗಳ ಸಂಯುಕ್ತ ಅಂಚೆಚೀಟಿಗಳನ್ನು ಬಿಡುಗಡೆ ಮಾಡಿತು. ಆ ಸ್ಮರಣೀಯ ಅಂಚೆ ಸರಣಿಯಲ್ಲಿ ಶ್ರೀರಾಮನದ್ದೇ ವಿಶೇಷ ಸ್ಥಾನ. ಆಯಾ ದೇಶಗಳ ಸಾಂಸ್ಕೃತಿಕ ಇತಿಹಾಸದಲ್ಲಿ ಶ್ರೀರಾಮ ಮೂಡಿಬಂದಿರುವುದನ್ನು ಅಂಚೆಚೀಟಿಗಳಲ್ಲಿ ಚಿತ್ರಿಸಲಾಗಿದೆ. ನಾಟಕ, ದೇವಾಲಯ, ನೃತ್ಯಗಳಲ್ಲಿ ಶ್ರೀರಾಮ ಕಾಣಿಸಿಕೊಂಡಿರುವುದು ಈ ಜಂಟಿ ಅಂಚೆ ಸರಣಿಯಲ್ಲಿನ ಮುಖ್ಯಾಂಶ.

ಪ್ರತಿಕ್ರಿಯಿಸಿ: feedback@sudha.co.in